ದಿನಾಂಕಃ 05-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ ಎನ ಎಂ ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳೆಲ್ಲವನ್ನು ನಾನೇ ಸ್ವತಃ ಹೇಳಿ ಬರೆಯಿಸಿದ್ದು ಅವೆಲ್ಲವುಗಳು ಸತ್ಯವಾಗಿರುತ್ತವೆ.

ವಾದಿಯು ಸಾಕ್ಷಿದಾರರ ಹೆಸರಿನಲ್ಲಿ ಬರೆದುಕೊಟ್ಟಂತಹ ವಿಶೇಷ ಮೊಕ್ತಿಯಾರ ಪತ್ರವನ್ನು ನಿಪಿ 1 ಎಂದು, ಅಬ್ದುಲಸತ್ತಾರ ತಂದೆ ಮಹ್ಮದಗೌಸ ಶೇಖಸನದಿ ಇವರು ವಾದಿಯ ಹೆಸರಿನಲ್ಲಿ ಬರೆದುಕೊಟ್ಟಂತಹ ಕಬ್ಜಾರಹಿತ ಖರೀದಿ ಕರಾರುಪತ್ರವನ್ನು ನಿಪಿ 2 ಎಂದು, ನಿಪಿ 1 ರ ಮೇಲಿನ ಸಾಕ್ಷಿದಾರರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎ ಎಂದು, ನಿಪಿ 2 ರ ಮೇಲಿನ ಮೃತ ಅಬ್ದುಲಸತ್ತಾರನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಬಿ ಎಂದು, ಸಾಕ್ಷಿದಾರರು ಅಂತಾ ಪಕ್ಕಿರಗೌಡ ವೀರನಗೌಡ ಹುಡೇದಗೌಡರ ಇವರ ಸಹಿಯನ್ನು ನಿಪಿ 2 ಸಿ ಎಂದು, ಬಸವರಾಜ ದರ್ಮಪ್ಪ ಅಗಡಿ ಇವರ ಸಹಿಯನ್ನು ನಿಪಿ 2 ಡಿ ಎಂದು, ಠಾಕನಗೌಡ ವೀರುಪಾಕ್ಷಗೌಡ ಇವರ ಸಹಿಯನ್ನು ನಿಪಿ 2 ಇ ಎಂದು, ಸೋಮಪ್ಪ ಹೊನ್ನಪ್ಪ ಹೊನ್ನಪ್ಪನವರ ಇವರ ಸಹಿಯನ್ನು ನಿಪಿ 2 ಎಫ ಎಂದು ಗುರುತಿಸಲಾಯಿತು. ರಿ ಸ ನಂ. 90/2 ಬ/1 ವಿಸ್ತೀರ್ಣ 2 ಎಕರೆ ಜಮೀನಿನ ಪಹಣಿ ಪತ್ರಿಕೆಗಳನ್ನು ನಿಪಿ 3 ಮತ್ತು ನಿಪಿ 4 ಎಂದು, ಎಂ ಆರ್ ನಂ. ಹೆಚ್ 9 ರ ಆದೇಶದ ಧೃಡೀಕೃತ ನಕಲನ್ನು ನಿಪಿ 5 ಎಂದು, ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿ 1 ನೇ ಪ್ರತಿವಾದಿಯ ಗಂಡ, ಪ್ರತಿವಾದಿ 8, 9, 10, 11, 12, 13, 14, 15 ಹಾಗೂ 16 ರವರಿಗೆ ನೀಡಿರುವ ನೋಟಿಸನ ಕಚೇರಿ ಪ್ರತಿಯನ್ನು ನಿಪಿ 6 ಎಂದು, 10 ನೊಂದಾಯಿತ ಅಂಚೆ ರಸೀದಿಗಳನ್ನು

ಕ್ರಮವಾಗಿ ನಿಪಿ 7 ರಿಂದ ನಿಪಿ 16 ಎಂದು, 7 ನೊಂದಾಯಿತ ಅಂಚೆ ಸ್ವಿಕೃತಿ ಪ್ರತಿಗಳನ್ನು ಕ್ರಮವಾಗಿ ನಿಪಿ 17 ರಿಂದ ನಿಪಿ 23 ಎಂದು, ಪ್ರತಿವಾದಿ 8 ವಿಗೆ ತೆಗೆಸಿಕೊಟ್ಟಂತಹ ನೋಟಿಸು ಸರಿಯಾದ ವಿಳಾಸದಲ್ಲಿ ಇರುವುದಿಲ್ಲ ಎಂದು ಹೇಳಿ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 24 ಎಂದು, ಅದರಲ್ಲಿನ ನೋಟಿಸಿನ ಪ್ರತಿಯನ್ನು ನಿಪಿ 24 ಎ ಎಂದು, ಪ್ರತಿವಾದಿ 12 ವಿಗೆ ಕಳಿಸಿಕೊಟ್ಟಂತಹ ನೋಟಿಸನ್ನು ಅವಳು ತೆಗೆದುಕೊಳ್ಳಲು ನಿರಾಕರಿಸಿದ್ದು ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 25 ಎಂದು, ಅದರಲ್ಲಿನ ನೋಟಿಸನ ಪ್ರತಿಯನ್ನು ನಿಪಿ 25 ಎ ಎಂದು ಗುರುತಿಸಲಾಯಿತು. ಪ್ರತಿವಾದಿ 9, 10, 14, 16 ಇವರು ತಮ್ಮ ವಕೀಲರ ಮೂಲಕ ನೀಡಿರತಕ್ಕಂತಹ ಉತ್ತರದ ನೋಟಿಸನ ಪ್ರತಿಯನ್ನು ನಿಪಿ 26 ಎಂದು, ಪ್ರತಿವಾದಿ 3 ರವರಿಗೆ ಕಳಿಸಿಕೊಟ್ಟಂತಹ ನೋಟಿಸು ಅವರು ಆ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದು ಹೇಳಿ ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 27 ಎಂದು, ಅದರಲ್ಲಿನ ನೋಟಿಸನ ಪ್ರತಿಯನ್ನು ನಿಪಿ 27 ಎ ಎಂದು, ದಿಃ 24.09.2018 ರಂದು ಮೃತ ಅಬ್ಲುಲಗಣಿ ಶೇಖಸನದಿ ವಾರಸುದಾರರಾದ 1 ಎ ದಿಂದ 1 ಜಿ ಹಾಗೂ ಪ್ರತಿವಾದಿ 8, 9, 10, 11, 12, 13, 14, 15 ಹಾಗೂ 16 ರವರಿಗೆ ನೀಡಿರುವ ನೋಟಿಸನ ಕಚೇರಿ ಪ್ರತಿಯನ್ನು ನಿಪಿ 28 ಎಂದು, 14 ನೊಂದಾಯಿತ ಅಂಚೆ ರಸೀದಿಗಳನ್ನು ಕ್ರಮವಾಗಿ ನಿಪಿ 29 ರಿಂದ ನಿಪಿ 42 ಎಂದು, ಪ್ರತಿವಾದಿ 4, 5, 6, 7, 10 ರವರು ಆ ಅಂಚೆ ಲಕೋಟೆ ಮೇಲೆ ನಮೂದಿಸಿರುವ ವಿಳಾಸದ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದು ಹೇಳಿ ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಪಿ 43 ರಿಂದ ನಿಪಿ 47 ಎಂದು, ಅವುಗಳಲ್ಲಿನ ನೋಟಿಸು ಪ್ರತಿಗಳನ್ನು ಕ್ರಮವಾಗಿ ನಿಪಿ 43 ಎ ದಿಂದ ನಿಪಿ 47 ಎ ಎಂದು, ಪ್ರತಿವಾದಿ 8 ರವರಿಗೆ ಕಳಿಸಿಕೊಟ್ಟಂತಹ ನೊಂದಾಯಿತ ಅಂಚೆಯ

ವಿಳಾಸದ ವ್ಯಕ್ತಿಯ ಬಗೆಗ ಮಾಹಿತಿ ಇರುವುದಿಲ್ಲ ಎಂದು ಹೇಳಿ ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 48 ಎಂದು, ಅದರಲ್ಲಿನ ನೋಟಿಸ ಪ್ರತಿಯನ್ನು ನಿಪಿ 48 ಎ ಎಂದು, ಪ್ರತಿವಾದಿ 12 ರವರಿಗೆ ಕಳಿಸಿಕೊಟ್ಟ ನೋಟಿಸನ್ನು ತೆಗೆದುಕೊಳ್ಳಲು ನಿರಾಕರಿಸಿರುವುದರಿಂದ ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 49 ಎಂದು, ಅದರಲ್ಲಿನ ನೋಟಿಸ ಪ್ರತಿಯನ್ನು ನಿಪಿ 49 ಎ ಎಂದು, ಪ್ರತಿವಾದಿ 13 ರವರಿಗೆ ಕಳಿಸಿಕೊಟ್ಟ ನೋಟಿಸನ್ನು 7 ದಿನಗಳು ಆದರೂ ತೆಗೆದುಕೊಳ್ಳದೇ ಇರುವುದರಿಂದ ಮರಳಿ ಬಂದ ನೊಂದಾಯಿತ ಅಂಚೆ ಲಕೋಟೆಯನ್ನು ನಿಪಿ 50 ಎಂದು, ಅದರಲ್ಲಿನ ನೋಟಿಸ ಪ್ರತಿಯನ್ನು ನಿಪಿ 50 ಎ ಎಂದು, ಪ್ರತಿವಾದಿ 9, 11, 16, 14 ರವರಿಗೆ ನೋಟಿಸು ಜಾರಿಯಾದ ಬಗ್ಗೆ ನೊಂದಾಯಿತ ಅಂಚೆ ಸ್ವಿಕೃತ ಪ್ರತಿಗಳನ್ನು ಕ್ರಮವಾಗಿ ನಿಪಿ 51 ರಿಂದ ನಿಪಿ 55 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ವಿನಂತಿ ಇರುವುದು.

<u>ಪಾಟಿ</u>_<u>ಸವಾಲುಃ</u>- ಪ್ರತಿವಾದಿ ಪರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.

ಅಸಲು ದಾವಾ ನಂ. 128/2018
ಪಿ ಡಬ್ಲು 1

ಅಸಲು ದಾವಾ  ನಂ. 128/2018
ಪಿ ಡಬ್ಲು 1

ಅಸಲು ದಾವಾ  ನಂ. 128/2018
ಪಿ ಡಬ್ಲು 1